***ವಿಷಯ : ಸಾರ್ವಜನಿಕ ಗ್ರಂಥಾಲಯಗಳಿಗೆ ಪುಸ್ತಕಗಳ ಖರೀದಿಗೆ ಹಣ ಬಿಡುಗಡೆ***

1332 (1913)-ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ವಯಸ್ಕರ ಶಿಕ್ಷಣ ಹಾಗೂ ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1995-96, 1996-97ನೇ ಸಾಲಿನ ಫೆಬ್ರವರಿ 28ನೇ ತಾರೀಖಿನವರೆಗೆ ಸಾರ್ವಜನಿಕ ಗ್ರಂಥಾಲಯಗಳಿಗೆ ಸರ್ಕಾರ ಎಷ್ಟು ಲಕ್ಷ ರೂ.ಗಳ ಪುಸ್ತಕಗಳನ್ನು ಖರೀದಿಸಿರುತ್ತದೆ. ಈ ಪುಸ್ತಕಗಳನ್ನು ಯಾವ ಆಧಾರದ ಮೇಲೆ ಖರೀದಿಸಲಾಗಿದೆ. (ವಿವರ)

ಆ) ಹಲವಾರು ಗ್ರಂಥಾಲಯಗಳು ಖರೀದಿಸಿದ ಪ್ರತಿಯನ್ನೇ ಖರೀದಿಸಿ ಬಂದಿದ್ದಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮಗಳೇನು

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಹಾಗೂ ಗ್ರಂಥಾಲಯ ರಾಜ್ಯ ಸಚಿವರು.)

| ಅ) | (ರೂ. ಲಕ್ಷಗಳಲ್ಲಿ) |
|---|---|
| 1995-96 | 156.15 |
| 1996-97 | 150.93 |
| (ಫೆಬ್ರವರಿ 28ರವರೆಗೆ ) | |

ಅ) ಸಾರ್ವಜನಿಕ ಗ್ರಂಥಾಲಯ ಅಂದರೆ ನಗರ ರಾಜ್ಯ ಜಿಲ್ಲಾ ಕೇಂದ್ರ ಗ್ರಂಥಾಲಯಗಳಿಗೆ ಗ್ರಂಥಗಳನ್ನು ಖರೀದಿಸಲು ರಾಜ್ಯಮಟ್ಟದ 11 ಸದಸ್ಯರನ್ನೊಳಗೊಂಡ ಅಧಿಕಾರೇತರ ಸಮಿತಿ ಇದ್ದು ವರ್ಷದಲ್ಲಿ 3-4 ಸಲ ಸಭೆ ಸೇರಿ ಆಯಾ ವರ್ಷದಲ್ಲಿ ಪ್ರಕಟಗೊಂಡ ಗ್ರಂಥಗಳನ್ನು ಆಯ್ಕೆಗಾಗಿ ಕರೆದು ಉತ್ತಮ ಗ್ರಂಥಗಳನ್ನು ಆಯ್ಕೆ ಮಾಡುವುದು. ಈ ರೀತಿ ಆಯ್ಕೆ ಮಾಡಿದ ಗ್ರಂಥಗಳನ್ನು ರಾಜ್ಯ, ನಗರ, ಜಿಲ್ಲಾ ಕೇಂದ್ರ ಗ್ರಂಥಾಲಯಗಳು ಆಯಾ ಪ್ರಾಧಿಕಾರದ ಆರ್ಥಿಕ ಲಭ್ಯತೆಗನುಗುಣವಾಗಿ ಖರೀದಿಸುತ್ತವೆ.

ಆಯ್ಕೆ ಸಮಿತಿಯು ಆಯ್ಕೆ ಮಾಡಿದ ಗ್ರಂಥಗಳನ್ನು ಖರೀದಿಸಲಾಗುತ್ತದೆ. ಖರೀದಿಸಿದ ಪ್ರತಿಗಳನ್ನು ಮತ್ತೆ ಮತ್ತೆ ಖರೀದಿಸಿದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ನಿಯಮಾನುಸಾರ ಒಂದು ಗ್ರಂಥಾಲಯಕ್ಕೆ ಒಂದು ಶೀರ್ಷಿಕೆಯ 3 ಪ್ರತಿಗಳಿಗಿಂತ ಹೆಚ್ಚಿಗೆ ಖರೀದಿ ಮಾಡಲು ಅವಕಾಶವಿರುವುದಿಲ್ಲ.